4. ಗಮನ ಸೆಳೆಯುವ ಸೂಚನೆ.

ವಿಷಯ: ಮಲಪ್ರಭಾ ಅಣೆಕಟ್ಟಿನಲ್ಲಿ ಪೂರ್ಣಪ್ರಮಾಣದ ನೀರು ಶೇಖರಣೆ ಮಾಡಲು ಸಾಧ್ಯವಾಗದೇ ಅಚ್ಚುಕಟ್ಟು ಪ್ರದೇಶದ ರೈತರಿಗೆ ತೊಂದರೆಯಾಗಿರುವ ಪ್ರಯುಕ್ತ ಮಹದಾಯಿ ಹಾಗೂ ಇತರ ಉಪ ನದಿಗಳಿಂದ ನೀರನ್ನು ಬಿಡುವ ಬಗ್ಗೆ.

ಶ್ರೀ ಪಿ.ಸಿ.ಸಿದ್ದನಗೌಡರ್ (ಕಲಘಟಗಿ):- ಮಾನ್ಯ ಅಧ್ಯಕ್ಷರೆ, ಮಲಪ್ರಭ ಅಚ್ಚುಕಟ್ಟಿನಲ್ಲಿ ಪೂರ್ಣಪ್ರಮಾಣದ ನೀರು ಶೇಖರಣೆ ಮಾಡಲು ಸಾಧ್ಯವಾಗದೇ ಅಚ್ಚುಕಟ್ಟು ಪ್ರದೇಶದ ರೈತರಿಗೆ ತೊಂದರೆಯಾಗಿರುವ ಪ್ರಯುಕ್ತ, ಜಲಾಶಯದ ಮೇಲ್ಭಟ್ಟದಲ್ಲಿರುವ ಮಹದಾಯಿ ಹಾಗೂ ಇತರ ಉಪನದಿಗಳಿಂದ ನೀರನ್ನು ಬಿಡುವ ಬಗ್ಗೆ ಭಾರೀ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಮಲಪ್ರಭಾ ಜಲಾಶಯ ಯೋಜನೆಯು 1972ನೆ ಇಸವಿಯಲ್ಲಿ ಪೂರ್ಣಗೊಂಡಿದೆ. ಈ ಯೋಜನೆಯು 48.23 ದಶಲಕ್ಷ ಘನ ಅಡಿ ನೀರಿನ ಸಾಮರ್ಥ್ಯ ಹೊಂದಿದ್ದು 218191 ಹೆಕ್ಟೇರ್ ಭೂಮಿಗೆ ನೀರಾವರಿ ಒದಗಿಸುತ್ತದೆ.

ಈ ಜಲಾಶಯವು ಪ್ರಾರಂಭದಿಂದ ಕೇವಲ 5 ವರ್ಷಗಳು ಮಾತ್ರ ತುಂಬಿದೆ. ಇದುವರೆವಿಗೂ ಸಾಧಿಸಲಾದ ನೀರಾವರಿ ಸಾಮರ್ಥ್ಯ 161594 ಹೆಕ್ಟೇರ್ ಆಗಿದ್ದು 115560 ಹೆಕ್ಟೇರ್ ಭೂಮಿಗೆ ನೀರುಣ್ಣಿಸಲಾಗುತ್ತದೆ.

ಜಲಾಶಯದ ನೀರಿನ ಮಟ್ಟ ದಿನಾಂಕ 18.7.1996ರಂದು 2042.85 ಅಡಿಗಳಿದ್ದು 6.72 ದಶಲಕ್ಷ ಘನ ಅಡಿಗಳ ನೀರಿನ ಶೇಖರಣೆ ಇರುತ್ತದೆ. ಜಲಾಶಯದ ಗರಿಷ್ಟ ಮಟ್ಟ 2079.0 ಅಡಿಗಳಷ್ಟು ಇದ್ದು ಗರಿಷ್ಟ ಶೇಖರಣೆ 37.73 ದಶಲಕ್ಷ ಘನ ಅಡಿಗಳಾಗಿರುತ್ತವೆ. ಜಲಾಶಯಕ್ಕೆ ಈಗ ಇರುವ ಕಡಿಮೆ ನೀರಿನ ಹರಿವನ್ನು ಗಣನೆಗೆ ತೆಗೆದುಕೊಂಡು ಸ್ವಲ್ಪಮಟ್ಟಿಗೆ ಪಶ್ಚಿಮಾಭಿಮುಖವಾಗಿ ಹರಿಯುವ ಮಹದಾಯಿ ನದಿಯಿಂದ ಈ ಪ್ರಮಾಣವನ್ನು ತುಂಬಲು ಯೋಜಿಸಿದೆ.

ಮಹದಾಯಿ ನದಿ ನೀರನ್ನು ಮಲಪ್ರಭಾ ಜಲಾಶಯಕ್ಕೆ ಹಾಯಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ ಯೋಜನೆಯಿಂದ ಕೆಳಗೆ ಸೂಚಿಸಿರುವಂತೆ 9 ಟಿ.ಎಂ.ಸಿ. ಪ್ರಮಾಣದ ನೀರನ್ನು ಮಲಪ್ರಭಾ ಜಲಾಶಯಕ್ಕೆ ಹಾಯಿಸುವ ಉದ್ದೇಶ ಹೊಂದಿದೆ.

1. ಕರ್ನಾಟಕ ವಿದ್ಯುತ್ ನಿಗಮವು ಮಹಾದಾಯಿ ನದಿಗೆ ಅಡ್ಡಲಾಗಿ ಖಾನಾಪುರ ತಾಲ್ಲೂಕಿನ ಕೋಟ್ನಿ ಬಳಿ ಉದ್ದೇಶಿಸಿರುವ ಜಲಾಶಯದಿಂದ 4 ಟಿ.ಎಂ.ಸಿ.

2. ಖಾನಾಪುರ ತಾಲ್ಲೂಕಿನಲ್ಲಿ ಪಶ್ಚಿಮ ಮುಖಿ ನದಿಗಳಾದ ಕಳಸ, ಹಳತಾರ ಮತ್ತು ಪೋಟ್ಲಿ ನದಿಗಳಿಗೆ ಅಡ್ಡಲಾಗಿ ಉದ್ದೇಶಿಸಿರುವ ಜಲಾಶಯಗಳಿಂದ 5 ಟಿ.ಎಂ.ಸಿ.

1996-97ನೇ ಸಾಲಿನ ದರಗಳ ಪ್ರಕಾರ ಈ ಯೋಜನೆಗೆ ತಗಲುವ ವೆಚ್ಚವನ್ನು 181 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

ಮಹಾದಾಯಿ ನದಿಯು ಕರ್ನಾಟಕ ಮತ್ತು ಗೋವಾ ರಾಜ್ಯಗಳಿಗೆ ಸೇರಿರುವ ಅಂತರರಾಜ್ಯ ನದಿ ಆಗಿರುವುದರಿಂದ, ಗೋವಾ ಸರ್ಕಾರದ ಸಹಮತಿ ದೊರೆತ ನಂತರವೇ ಈ ಯೋಜನೆಯ ಕೆಲಸವನ್ನು ಪ್ರಾರಂಭಿಸಬಹುದಾಗಿದೆ.

ಆಗಸ್ಟ್ 1994ರಲ್ಲಿ ಈ ಯೋಜನೆಯ ಬಗ್ಗೆ ಕರ್ನಾಟಕ ಮತ್ತು ಗೋವಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆದಿದ್ದು ಈ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಈ ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮದ ಬಗ್ಗೆ ಅಧ್ಯಯನ ನಡೆಸಲು ನಾಗಪುರದ ನೀರಿ ಸಂಸ್ಥೆಗೆ ವಹಿಸಿದೆ. ಈ ಸಂಸ್ಥೆಯು ಅಧ್ಯಯನ ನಡೆಸುತ್ತಿದ್ದು ಒಂದು ಪ್ರಾಥಮಿಕ ವರದಿಯನ್ನು ಇತ್ತೀಚೆಗೆ ಕರ್ನಾಟಕ ವಿದ್ಯುತ್ ನಿಗಮಕ್ಕೆ ನೀಡಿದೆ. ಅಂತಿಮ ವರದಿ ಸಲ್ಲಿಸಲು ಈ ಸಂಸ್ಥೆಗೆ 14 ತಿಂಗಳ ಅವಧಿ ಕೊಡಲಾಗಿದೆ. ಅಂತಿಮ ವರದಿ ಸ್ವೀಕೃತವಾದ ನಂತರ ಗೋವಾ ಸರ್ಕಾರದ ಸಹಮತಿ ಪಡೆದು ಈ ಯೋಜನೆಗಳ ಕೆಲಸಗಳನ್ನು ಪ್ರಾರಂಭಿಸಲಾಗುವುದು.

ಈ ಯೋಜನೆಯ ಪೂರಕ ಕಾಮಗಾರಿಗಳಾದ ಕಛೇರಿ, ಕಟ್ಟಡ, ವಸತಿ ಗೃಹ, ಕೂಡು ರಸ್ತೆ ಹಾಗೂ ಅನ್ವೇಶಣೆಗೆ ಬೇಕಾದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು ಮಾರ್ಚ್ 1996ರವರೆಗೆ ಒಟ್ಟು ರೂ. 80.88 ಲಕ್ಷಗಳನ್ನು ಖರ್ಚು ಮಾಡಲಾಗಿದೆ. 1996-97ನೇ ಸಾಲಿನಲ್ಲಿ ಈ ಯೋಜನೆಗೆ ರೂ.50.00 ಲಕ್ಷ ಅನುದಾನ ಒದಗಿಸಲಾಗಿದೆ.

ಶ್ರೀ ಪಿ.ಸಿ.ಸಿದ್ಧನಗೌಡರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ನೀರಾವರಿ ಸಚಿವರ ಹೇಳಿಕೆಯನ್ನು ನಾನು ಕೇಳಿದ್ದೇನೆ, ಈಗಾಗಲೇ ನಮ್ಮ ಸರ್ಕಾರದಿಂದ ಗೋವಾ ಸರ್ಕಾರಕ್ಕೆ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಬೊಮ್ಮಾಯಿಯವರು ಮತ್ತು ಮಾನ್ಯ ದೇವೇಗೌಡರು ಪ್ರಯತ್ನ ಮಾಡಿದ್ದರು. ನಾನು ಮಾನ್ಯ ಸಭಾ ನಾಯಕರಾದ ಮುಖ್ಯಮಂತ್ರಿಗಳಿಗೆ ಕೂಡ ವಿನಂತಿ ಮಾಡಿಕೊಳ್ಳುತ್ತೇನೆ. ಗೋವಾ ಮುಖ್ಯಮಂತ್ರಿಗಳ ಜೊತೆ ತ್ವರಿತಗತಿಯಲ್ಲಿ ಮಾತನಾಡಿ ಈ ಮಹದಾಯಿ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕಾದರೆ ಧಾರವಾಡ, ಬೆಳಗಾಂ, ಬಿಜಾಪುರ ಈ ಮೂರು ಜಿಲ್ಲೆಗಳ ಬಹಳ ರೈತರಿಗೆ ಅನುಕೂಲವಾಗುತ್ತದೆ. ಈ ಒಂದು ಯೋಜನೆಯಿಂದ ರೈತರಿಗೆ ನೀರಾವರಿ ಅನುಕೂಲ ಮಾಡಿದರೂ ಕುಡಿಯುವ ನೀರಿನ ಯೋಜನೆ ಕೂಡ ಆಗುತ್ತದೆ. ಮಹದಾಯಿ ಯೋಜನೆ ಬರುವುದಕ್ಕಿಂತ ಪೂರ್ವದಲ್ಲಿ ಮಲಪ್ರಭ ನೀರಾವರಿ ಯೋಜನೆ ಏನಿದೆ ಇದರಲ್ಲಿ ನಮಗೆ 46 ಟಿ.ಎಮ್.ಸಿ. ನೀರನ್ನು ಉಪಯೋಗ ಮಾಡಿಕೊಳ್ಳತಕ್ಕಂಥದ್ದು ಇತ್ತು, ಅದು ಆಕ್ಚುಯಲ್ ಆಗಿ 13-14 ಟಿ.ಎಮ್.ಸಿ. ನೀರು

ಮಾತ್ರ ಮಲಪ್ರಭದಲ್ಲಿ ಇರುತ್ತದೆ. ಹುಬ್ಬಳ್ಳಿ ಧಾರವಾಡದ ನಾಗರೀಕರಿಗೂ ಡ್ರಿಂಕಿಂಗ್ ವಾಟರ್ ಕೊಟ್ಟಿದ್ದಾರೆ. ಅದಕ್ಕೆ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ನೀರಾವರಿ ಸಚಿವರಿಗೆ ವಿನಂತಿಸಿಕೊಳ್ಳುವುದೇನೆಂದರೆ, ಗೋವಾ ಸರ್ಕಾರ ಮುಖ್ಯಮಂತ್ರಿಗಳ ಜೊತೆ ಭೇಟಿಯಾಗಿ, ಈ ಯೋಜನೆಯನ್ನು ತೀವ್ರವಾಗಿ ಕಾರ್ಯರೂಪಕ್ಕೆ ತರಬೇಕೆಂದು ನಾನು ವಿನಂತಿ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಆರ್.ಯಾವಗಲ್ (ನರಗುಂದ):- ಮಾನ್ಯ ಉಪಾಧ್ಯಕ್ಷರೆ, ಮಲಪ್ರಭ ಯೋಜನೆ ಎಂದರೆ ನಮಗೆ ವರ ಆಗಿತ್ತು. ಆದರೆ ಈಗ ಇದೊಂದು ಶಾಪವಾಗಿ ಪರಿವರ್ತನೆಯಾಗುತ್ತಿದೆ. ಕಾರಣ ಏನೆಂದರೆ, ಸುಮಾರು 48 TMCಗೆ ಅನುಮತಿ ನೀಡಿ ಯೋಜನೆಯನ್ನು ತಯಾರಿಸಿದರು. ಸರಾಸರಿ 40 TMCಗೂ ಕಡಿಮೆ ಬಂದಿದೆ. ಅಲ್ಲದೆ 1992ರವರೆಗೆ ಸರಾಸರಿ ಹಿಡಿದರೆ, ಬಹಳಷ್ಟು ಕಾಲದಲ್ಲಿ ಇತ್ತೀಚಿನ ನಾಲ್ಕಾರು ವರ್ಷಗಳಲ್ಲಿ ಬಹುತೇಕ ಇದು 20 ಟಿ.ಎಮ್.ಸಿ. ನೀರು ಇಲ್ಲ ಎಂದು ನಾನು ಭಾವಿಸುತ್ತೇನೆ.

12.40 ಪಿ.ಎಂ.

ಇದರಿಂದಾಗಿ ಈ ಯೋಜನೆ ಯಾವ ಬೆಳೆಗೆ ನೀರನ್ನು ಕೊಡಲಿಕ್ಕೆ ಸಾಧ್ಯ ಎನ್ನುವದು ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಜೂನ್ ಒಂದನೇ ತಾರೀಖಿಗೆ ಏನು ಸಲಹಾ ಸಮಿತಿಯಲ್ಲಿ ಮೀಟಿಂಗ್ ಕರೆದು, ಅಡ್ಮಿನಿಸ್ಟ್ರೆಟಿವ್ ಆಫೀಸರ್ ಅಥವಾ ಯಾರೋ ಅಧಿಕಾರಿಗಳು ಸೇರಿ ನಿರ್ಧಾರ ಮಾಡಿದರು, ಆದರೆ ಇನ್ನುವರೆಗೆ ಜಲಾಶಯದಲ್ಲಿ ನೀರು ಬಂದಿಲ್ಲ. ನೀರಿನ ಮಟ್ಟ ಸಮುದ್ರ ಮಟ್ಟದಿಂದ 42 ಇದ್ದರೆ, ಆದರಲ್ಲಿರುವಂಥ ಒಟ್ಟು ನೀರು 7 ಟಿ.ಎಂ.ಸಿ. ಸಹಿತ ದಾಟಿಲ್ಲ. ಸೀ ಲೆವಲ್ ಎಂದು ಏನು ನಾವು ಹೇಳುತ್ತೇವೆ, ಆ ಸೀ ಲೆವಲ್ಲಿನಿಂದ ಹೊರಗಿನ್ನೂ ಬಂದಿಲ್ಲ. ನಾವು ನೀರನ್ನು ಬಿಡಬೇಕಾದರೆ ಕನಿಷ್ಟ 50 ಘನಮೀಟರ್ ನೀರಾದರೂ ಬರಬೇಕು. ಅದು ಬಂದರೆ ನೀರನ್ನು ಹೊರಗಡೆ ಬಿಡುವಂಥ ವ್ಯವಸ್ಥೆ ಮಾಡುತ್ತಾರೆ. ಈ ವರ್ಷವಷ್ಟೇ ಅಲ್ಲ ಕಳೆದ ನಾಲ್ಕಾರು ವರ್ಷದಿಂದ ಇದು ಆಗುತ್ತಿದೆ. ಇದು ಬಹುತೇಕ ಇಂಪೌಂಡ್ ಮಾಡಿದ ನಂತರ ಯಾವ ರೀತಿಯಾಗಿ ಕಾಲುವೆ ರಚನೆಯಾದಾಗ ನೀರು ಬಿಡುತ್ತಾ ಬಂದಿದ್ದಾರೋ, ಆ ನೀರು ಇದಕ್ಕೆ 90 ಕಿ.ಮೀ. ವ್ಯಾಪ್ತಿಯಲ್ಲಿ ಬಲದಂಡೆ, ಅಷ್ಟೇ ವ್ಯಾಪ್ತಿಯವರೆಗೆ, ದೂರದವರೆಗೆ ಎಡದಂಡೆ ನಿರ್ಮಾಣ ಮಾಡಿ ನೀರನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಲ್ಲಿಯವರೆಗೆ ಒಂದು ಬೆಳೆಗೂ ಕೂಡ ನೀರನ್ನು ಕೊಡಲಿಕ್ಕೆ ಸಾಧ್ಯವಾಗಿಲ್ಲ. ಇನ್ನು ಅದರ ಮುಂದೆ 90ರ ಮುಂದೆ 114 ಅಥವಾ 120 ಬಲದಂಡೆ, 130 ಎಡದಂಡೆ ಈ ಯೋಜನೆಗೆ ಅಲ್ಲಿ ನೀರನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದು ಹಾಸ್ಯಾಸ್ಪದ ಆದೀತು ಎಂದು ನಾನು ಭಾವಿಸುತ್ತೇನೆ. ಈಗ ಇರುವಂಥ ನೀರನ್ನು ಏನು ಕಾಲುವೆಗೆ ಕೊಡುತ್ತಿದ್ದಾರೆ ಎಂಟು ಹತ್ತು ವರ್ಷಗಳಿಂದ ಅಲ್ಲೂ ಸಾಲದೇ ಇದ್ದಾಗ,

ಮುಂದೆ ಯಾವ ರೀತಿ ಕೊಡುವುದಕ್ಕೆ ಸಾಧ್ಯ ಇದೆ ಎಂದು ದಯವಿಟ್ಟು ಮಾನ್ಯ ಮಂತ್ರಿಗಳು ಗಮನಿಸಬೇಕು. ಇದಕ್ಕೆ ಪರಿಹಾರವೆಂದರೆ ಕಳೆದ ಹತ್ತಾರು ವರ್ಷಗಳಿಂದ ಈ ಯೋಜನೆಯ ಬಹುತೇಕ ಈಲ್ವನ್ನು ಕ್ಯಾಲ್ಕುಲೇಟ್ ಮಾಡಿದಾಗ, 48 ಎಂದು ಏನು ಅವರು ನಿರ್ಧಾರ ಮಾಡಿದ್ದಾರೆ, 44ಕ್ಕೆ ಅನುಮತಿ ನೀಡಿದರು, ಆಲ್ಲಿ ಇಂಪೌಂಡ್ ಮಾಡಿದ್ದುದು 38, ಆದರೆ ಸಾಧ್ಯತೆ ಇದ್ದದ್ದು 38ರಿಂದ 40. ಅಷ್ಟು ನೀರು ಬರದೆ ಯಾವ ರೀತಿ ಕ್ಯಾಲ್ಕುಲೇಟ್ ಮಾಡಿದರು? ಆ ಕಾಲದಲ್ಲಿ ಯಾವ ರೀತಿ ಇದನ್ನು ಲೆಕ್ಕಹಾಕಿದರು? ಇದು ಸುಮಾರು ಐದುಲಕ್ಷ ಎಕರೆಗೆ ನೀರು ಕೊಡುತ್ತದೆ. ಅದಕ್ಕೆ ಯೋಜನೆ ಹಾಕಿದ್ದೇವೆ ಎಂದು ಏನು ಹೇಳಿದರು ಅದು ಅತ್ಯಂತ ಅಸಾಧ್ಯದ ಮಾತು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದಕ್ಕೆ ಒಂದೇ ಪರಿಹಾರ ಏನು ಎಂದರೆ ಮಹಾದಾಯಿ ನದಿಯಿಂದ ಬರುವ ನಾಲ್ಕು ಉಪನದಿಗಳು ಏನು ಇವೆ, ಅವುಗಳ ಮೂಲದಿಂದ ಸುಮಾರು ಹತ್ತು ಟಿ.ಎಂ.ಸಿ. ನೀರನ್ನು ಪಡೆದುಕೊಂಡು ಇದಕ್ಕೆ ಕೊಡಬಹುದು. ಇದರ ಬಗ್ಗೆ ಮಾತುಕತೆಯಾಗಿದೆ ಎಂದು ನಾನು ಕೇಳಿದ್ದೇನೆ ಮತ್ತು ಇದರ ಬಗ್ಗೆ ಹಲವಾರು ಸಂದರ್ಭಗಳಲ್ಲಿ ಒತ್ತಾಯ ಮಾಡಿದಾಗ ಉತ್ತರ ಕೊಡುವಾಗ ಸಹ ಹೇಳಿದ್ದಾರೆ. ಇದು ಮೊದಲು ಇರಬಹುದು, ಶ್ರೀ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾಗ ಇರಬಹುದು, ಶ್ರೀ ಎಂ.ಎಸ್.ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದಾಗ ಇರಬಹುದು, 1994ರಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಈ ಬಗ್ಗೆ ಮಾತುಕತೆ ನಡೆದಿದೆ ಎಂದು ತಿಳಿದು ಬಂದಿದೆ. ಆದರೆ ಇದು ಹೋಗುವ ವೇಗವನ್ನು ನಾವು ನೋಡಿದರೆ, ಅದು ಪ್ರಾರಂಭವಾಗುವ ಮತ್ತು ಮುಗಿಯುವ ಹಂತವನ್ನು ನಾವು ನೋಡುವುದಕ್ಕೆ ಸಾಧ್ಯವಿಲ್ಲ. ನಾವು ನೋಡುತ್ತೇವೆಂದು ಭರವಸೆ ಇಲ್ಲ. ಇವೊತ್ತು ನೀರಾವರಿ ಇದ್ದೂ ಇಲ್ಲದ ಹಾಗೆ ಆಗಿದೆ. ಆಲ್ಲಿ ಬರಗಾಲದ ಛಾಯೆ ಬಿದ್ದಿದೆ. ಇದನ್ನು ಹತ್ತಾರು ವರ್ಷಗಳಲ್ಲಾದರೂ ಮಾಡಬೇಕು. ಇಲ್ಲದಿದ್ದರೆ ನಾವು ನೀರಾವರಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ನೀರಾವರಿ ಯೋಜನೆಗಳನ್ನು ಮಾಡಿ, ಸಾಕಷ್ಟು ಜಮೀನನ್ನು ಮುಳುಗಡೆ ಮಾಡಿಸಿ, ಅದರಿಂದ ಏನೂ ಪ್ರಯೋಜನ ಆಗಲಿಲ್ಲ ಎಂದರೆ, ಏನೂ ಪ್ರಯೋಜನ? ಆದಕಾರಣ ನಾನು ತಮ್ಮ ಮುಖಾಂತರ ಕೇಳಿಕೊಳ್ಳುವುದೆಂದರೆ ಮಾನ್ಯ ನೀರಾವರಿ ಸಚಿವರು ಆಲ್ಲಿ ಹೋಗಿ ನೋಡಿಕೊಂಡು ಬಂದು ಕ್ರಮವನ್ನು ತೆಗೆದುಕೊಳ್ಳುವುದು ಬಹಳ ಅವಶ್ಯಕವಿದೆ. ಇದರ ಬಗ್ಗೆ ಪ್ರಾಥಮಿಕ ವರದಿ ಕೂಡ ಬಂದಿದೆ ಎಂದು ಹೇಳಿದ್ದಾರೆ. ಪ್ರಧಾನ ಮಂತ್ರಿಗಳು ಕೂಡ ನಮ್ಮವರೇ ಇದ್ದಾರೆ, ನಾವು ಕೂಡ ಈಗಾಗಲೇ ಅವರಿಗೆ ಮನವಿಯನ್ನು ಸಲ್ಲಿಸಿದ್ದೇವೆ. ತಾವು ಕೂಡ ಆ ಸ್ಥಾನದ ಬಲವನ್ನು ಉಪಯೋಗ ಮಾಡಿಕೊಂಡು ಮಾನ್ಯ ನಾಗೇಗೌಡರು ನಮ್ಮನ್ನೆಲ್ಲಾ ಕರೆದುಕೊಂಡು ಅಥವಾ ತಾವೇ ಗೋವಾಕ್ಕೆ ಸ್ವತಃ ಹೋಗಿ ಮಾತುಕತೆ ಮಾಡಿ ಆದಷ್ಟು ಬೇಗ ಪರಿಹಾರ ಕಂಡುಹಿಡಿದು ಈ ಯೋಜನೆಯನ್ನು ಕ್ಲೀಯರ್ ಮಾಡಿಸಬೇಕೆಂದು ಒತ್ತಾಯ ಮಾಡುತ್ತೇನೆ.

+ ಶ್ರೀ ಶ್ರೀಶೈಲಪ್ಪ ಬಿದನೂರ್ (ರೋಣ):- ಮಾನ್ಯ ಸಭಾಧ್ಯಕ್ಷರೇ ನನ್ನ ಮತಕ್ಷೇತ್ರ ಮಲಪ್ರಭಾ ಯೋಜನೆಯ ಅಚ್ಚುಕಟ್ಟು ಪ್ರದೇಶದ ಕೊನೆಯ ಹಂತದಲ್ಲಿ ಬರುತ್ತದೆ. ನಮ್ಮ ಜನರು ನೀರಾವರಿ ಕನಸುಗಳನ್ನು ಸುಮಾರು ವರ್ಷಗಳಿಂದ ಕಾಣುತ್ತಿದ್ದಾರೆ. ಆ ಕನಸು ನನಸಾಗುವಂತೆ ಕಾಣುತ್ತಿಲ್ಲ. ಆ ಭಾಗದ ಜನರಿಗೆ ಈ ಯೋಜನೆ ರೂಪಿಸತಕ್ಕಂಥ ಹಂತದಲ್ಲಿ ಅನ್ಯಾಯವಾಗಿದೆ. ಆ ಜನಗಳಿಗೆ ಮೂಲಭೂತವಾಗಿ ನೀರಾವರಿ ಸೌಲಭ್ಯವನ್ನು ಒದಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದರು. ಆ ಯೋಜನೆಗೆ ಸುಮಾರು 48 ಟಿ.ಎಂ.ಸಿ. ನೀರು ಶೇಖರಣೆ ಮಾಡಿ ನೀರಾವರಿಗೆ ಉಪಯೋಗ ಮಾಡುವಂಥ ಕೆಲಸ ಏನು ಇತ್ತು, ಇವೊತ್ತು ಸುಮಾರು 37 ಟಿ.ಎಂ.ಸಿ ನೀರನ್ನು ಕೇವಲ 4 ಬಾರಿ, 36 ಟಿಎಂಸಿ ನೀರು ಜಲಾಶಯಗಳಲ್ಲಿ ಶೇಖರಣೆಯಾಗಿದೆ. ಸುಮಾರು ಹತ್ತು ಟಿ.ಎಂ.ಸಿಯಷ್ಟು ಆ ಜಲಾಶಯಗಳಿಗೆ ಕೊರತೆಯಾಗಿದೆ, ಆ ಕೊರತೆಯನ್ನು ತುಂಬಲಿಕ್ಕೆ, ಒಂದೇ ಒಂದು ಮಾರ್ಗ ಎಂದರೆ ಮಹದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಿಸತಕ್ಕಂಥ ಕೆಲಸ, ಬಹಳ ನೋವಿನಿಂದ ಹೇಳತಕ್ಕಂಥ ಸಂಗತಿ ಏನು ಎಂದರೆ ಈ ಮಹಾದಾಯಿ ನದಿಯನ್ನು ಮಲಪ್ರಭಾಗೆ ಜೋಡಿಸತಕ್ಕಂಥ ವಿಚಾರ ಬಹಳ ಆಮೆ ವೇಗದಲ್ಲಿ ನಡೆಯುತ್ತಿದೆ. ಸುಮಾರು ವರ್ಷಗಳಿಂದ ಈ ದಿಸೆಯಲ್ಲಿ ಚರ್ಚೆಯಾಗುತ್ತಿದೆ. ಸುಮಾರು ಎರಡು ಮೂರು ಬಾರಿ ಈ ಬಗ್ಗೆ ವಿವಿಧ ಪ್ರಶ್ನೆಗಳನ್ನು ಸನ್ಮಾನ್ಯ ಸಚಿವರಿಗೆ ಕೇಳಿದಾಗ ಈ ಯೋಜನೆ ಪರಿಶೀಲನೆಯಲ್ಲಿದೆ, ''ನೇರಿ'' ಎನ್ನತಕ್ಕಂಥ ನಾಗಪೂರದ ಸಂಸ್ಥೆಗೆ ಇದನ್ನು ಅಭ್ಯಾಸ ಮಾಡಲಿಕ್ಕೆ, ವರದಿಯನ್ನು ಸಲ್ಲಿಸಲಿಕ್ಕೆ ಕೊಟ್ಟಿದ್ದೇನೆ ಎನ್ನತಕ್ಕಂಥದ್ದನ್ನು ಹೋದವರ್ಷ ನಾನು ಈ ಸದನದಲ್ಲಿ ಪ್ರಶ್ನೆ ಕೇಳಿದ್ದಾಗ ಉತ್ತರ ಕೊಟ್ಟಿದ್ದರು, ಈ ವರ್ಷ ಕೂಡ ಅದೇ ಉತ್ತರ ಬಂದಿದೆ. ನಾನು ಸನ್ಮಾನ್ಯ ಸಚಿವರಿಗೆ ಹಾಗೂ ಸರ್ಕಾರಕ್ಕೆ ಕೇಳಿಕೊಳ್ಳುವುದು ಏನೆಂದರೆ ನೇರಿ ಜೊತೆ ತಾವು ಮಾತುಕತೆ ನಡೆಸಿ, ವರದಿಯನ್ನು ಅವರು ಶೀಘ್ರವಾಗಿ ಕೊಡುವ ಮೂಲಕ ಕೆಲಸವನ್ನು ಪ್ರಾರಂಭ ಮಾಡಬೇಕು. ಮಹಾದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಿಸತಕ್ಕಂಥ ಕೆಲಸ ಬೇಗನೆ ಪ್ರಾರಂಭವಾಗಬೇಕು, ಅದಕ್ಕೆ ಹೆಚ್ಚಿನ ಹಣಕಾಸನ್ನು ಒದಗಿಸತಕ್ಕಂಥ ಕೆಲಸವಾಗಬೇಕು, ಅಷ್ಟೇ ಅಲ್ಲ, ಗೋವಾ ರಾಜ್ಯದ ಜೊತೆ ತಾವು ಏನು ಮಾತುಕತೆ ಮಾಡಬೇಕೆಂದು ಮಾಡಿದ್ದೀರಿ, ಅದನ್ನು ಬೇಗ ಮಾಡಿ, ಗೋವಾ ರಾಜ್ಯದೊಳಗೆ ಮಹದಾಯಿ ನದಿಯನ್ನು ಮಾಂಡವಿ ಎಂದು ಕರೆಯುತ್ತಾರೆ. ಅಲ್ಲಿ ಈ ನದಿಯಿಂದ ಯಾವುದೇ ಉಪಯೋಗ ಮಾಡತಕ್ಕಂಥ ಯಾವುದೇ ಡ್ಯಾಮಾಗಲಿ, ಕುಡಿಯುವ ನೀರನ್ನು ಉಪಯೋಗ ಮಾಡತಕ್ಕಂಥ ಯಾವ ವಿಧಾನ ಇಲ್ಲ. ಅಷ್ಟೇ ಅಲ್ಲ ಇದು ಅವರಿಗೆ ಕೇವಲ ಒಂದು ಧಾರ್ಮಿಕವಾದ ಲೈವ್ ರಿವರ್ ಆಗಿದೆ ಎಂದು ಹಿಂದೆ ನಾನೊಂದು ಪತ್ರಿಕೆಯಲ್ಲಿ ಓದಿದ್ದೆ, ಮಾಂಡವಿ ನದಿಯನ್ನು ಗೋವಾ ರಾಜ್ಯದೊಳಗೆ ಯಾವುದೇ ಉಪಯೋಗ ಇಲ್ಲದೆ ಸಮುದ್ರ ಸೇರತಕ್ಕಂಥ ನದಿಯಾಗಿದೆ. ಇದರ ಬಗ್ಗೆ ತಾವು ಹೆಚ್ಚು ಒತ್ತಡವನ್ನು ಹಾಕಿ ಕೇಂದ್ರ ಸರ್ಕಾರದವರ ಮೇಲೆ ಹಾಕಿ ಈ ನದಿ ಬೇಗನೆ ಮಲಪ್ರಭಾ ನದಿಗೆ ಜೋಡಿಸತಕ್ಕಂಥ ನಿರ್ಣಯಕ್ಕೆ ತಾವು ಕ್ಲೀಯರೆನ್ಸ್ ಪಡೆಯಬೇಕು

ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಸನ್ಮಾನ್ಯ ಸಚಿವರಲ್ಲಿ ಹಾಗೂ ಸರ್ಕಾರದವರಲ್ಲಿ ಒತ್ತಾಯ ಮಾಡಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೇ, ಸಾಕಷ್ಟು ಹಿರಿಯ ಸದಸ್ಯರು ಇದರ ಬಗ್ಗೆ ಗಮನವನ್ನು ಸೆಳೆದಿದ್ದಾರೆ. ನಾನು ಕೂಡ ಇದರ ಬಗ್ಗೆ ಎರಡು ಮಾತುಗಳನ್ನು ಈ ಸದನದಲ್ಲಿ ಆಡದಿದ್ದರೆ ಅಪರಾಧ ಆದೀತು ಎಂದು ನಿಂತಿದ್ದೇನೆ. ಬಹುಶಃ ನಾಗೇಗೌಡರ ಕಾಲದಲ್ಲಿ ಇದು ಆಗದೇ ಇದ್ದರೆ ಮುಂದೆ ಯಾರ ಕಾಲದಲ್ಲಿ ಇದು ಆಗುತ್ತದೆ ಎನ್ನುವುದು ನಮಗೆ ವಿಶ್ವಾಸ ಇಲ್ಲ. ಈಗಾಗಲೇ ನಮ್ಮ ಅನೇಕ ಹಿರಿಯ ಸದಸ್ಯರು ಹೇಳಿದ ಹಾಗೆ ಮಹಾದಾಯಿ ನದಿಯ ಒಂದು ಪೈಸೆಯ ಉಪಯೋಗ ಕೂಡ ಗೋವಾ ರಾಜ್ಯಕ್ಕೆ ಆಗುವುದಿಲ್ಲ. ಸಮುದ್ರಕ್ಕೆ ಹರಿದು ಹೋಗುತ್ತಿದೆ. ನಾನು ಮೊನ್ನೆ ಎರಡು ಸಾರಿ ಹಾಗೂ ಹಿಂದೆ ಹತ್ತಾರು ಸಾರಿ ಪ್ರವಾಸಕ್ಕೆ ಆ ಭಾಗಕ್ಕೆ ಹೋದಾಗ ಅಲ್ಲಿಯ ಜನ ಮಲಪ್ರಭಾ ಸೇರಬೇಕು, ಲಕ್ಷಾಂತರ ಎಕರೆ ಜಮೀನಿಗೆ ನೀರನ್ನು ನಾವು ಆನಂದವಾಗಿ ಉಪಯೋಗ ಮಾಡಿಕೊಂಡು ಬೆಳೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವುದನ್ನು ಹೇಳಿದ್ದಾರೆ ಹಾಗೂ ಇದು ಅವರ ಬಹಳ ವರ್ಷಗಳ ಬೇಡಿಕೆ ಇದೆ. ಪ್ರಧಾನಮಂತ್ರಿಗಳು ನಮ್ಮವರೇ ಅಲ್ಲಿರುವಂಥ ಕಾಲದಲ್ಲಿ ಪ್ರಾರಂಭ ಮಾಡಿದರೆ ಅಲ್ಲಿರುವಂಥ ಲಕ್ಷಾಂತರ ಜನ ರೈತರು ಬದುಕಿರುವರೆಗೆ ನಿಮ್ಮ ಪೋಟೋ ಹಾಕಿಕೊಂಡು ಪೂಜೆ ಮಾಡುತ್ತಾರೆ. ಆ ಕೆಲಸವನ್ನು ತಾವು ದಯಮಾಡಿ ಮಾಡಬೇಕು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಅಧ್ಯಕ್ಷರೇ, ನಮ್ಮ ಮತಕ್ಷೇತ್ರವು ಕೂಡ ಇದಕ್ಕೆ ಒಳಗೊಂಡಿದೆ. ಬಹಳ ಪ್ರಾಮುಖ್ಯವಾದಂಥ ವಿಚಾರವನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ತಮ್ಮ ಮುಖಾಂತರ ಸರ್ಕಾರದವರು ಹಾಗೂ ಮಾನ್ಯ ಮಂತ್ರಿಗಳವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಕನ್ವರ್ಟ್ ಮಾಡಿದರೆ, ಬಹಳ ಒಳ್ಳೆಯದಾಗುತ್ತದೆ ಹಾಗೂ ಇದರ ಮೇಲೆ ಚರ್ಚೆಯಲ್ಲಿ ಬಹಳ ಜನರು ಭಾಗವಸಿಸಬಹುದು, ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಬಹುದು, ಸರ್ಕಾರದಿಂದ ನಿರ್ದಿಷ್ಟವಾದ ಉತ್ತರವನ್ನು ಬಯಸಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಗೋವಾ ಮುಖ್ಯ ಮಂತ್ರಿಗಳ ಹತ್ತಿರ ವೈಯಕ್ತಿಕವಾಗಿ ತಾವು ಮಾತನಾಡಿ ಅಲ್ಲಿ ಒಳಗಡೆ ಗುಟ್ಟಾಗಿ ಅಂಡರ್‌ಗ್ರೌಂಡ್ ವರ್ಕ್ ಆಗುತ್ತಿದೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾಗೇಗೌಡರು ಬಂದಮೇಲೆ ಎಲ್ಲಾ ಅಂದರೆ ಗ್ರೌಂಡ್ ಡಿಸ್ಕಷನ್ನೇ ಜಾಸ್ತಿಯಾಯಿತು, ಏನು ಕೇಳಿದರೂ ಛೇಂಬರ್‌ನಲ್ಲಿ ನಡೆಯಿರಿ, ಆಲಮಟ್ಟಿ ವಿಷಯ ಕೇಳಿ, ಛೇಂಬರ್‌ನಲ್ಲಿ ನಡೆಯಿರಿ, ಜುರಾಲ ಕೇಳಿ ಛೇಂಬರ್‌ನಲ್ಲಿ

ನಡೆಯಿರಿ, ಮಹಾದಾಯಿ ಕೇಳಿ ಛೇಂಬರ್‌ನಲ್ಲಿ ನಡೆಯಿರಿ, ಏನು ಇವೊತ್ತು ಮಾಡುತ್ತೀರಿ ಎಂದು ಹೇಳಿಬಿಡಿ, ಅಲ್ಲೇನು ಡಿಸ್ಕಶನ್ ಮಾಡುವುದು?

ಶ್ರೀ ಎಲ್.ಆರ್.ಶಿವರಾಮೇಗೌಡ:- ಛೇಂಬರ್ ಪ್ರಶ್ನೆ ಇಲ್ಲ, ಸ್ಪಷ್ಟವಾದ ಉತ್ತರ ಕೊಡಬೇಕು.

ಶ್ರೀ ಚಂದ್ರಕಾಂತ ಬೆಲ್ಲದ ಗುರಪ್ಪ:- ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಅನೇಕ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಮಹಾದಾಯಿ ನದಿಯನ್ನು ಮಲಪ್ರಭಾಕ್ಕೆ ತಂದು ಜೋಡಿಸದೇ ಇದ್ದರೆ, ಮಲಪ್ರಭಾ ಯೋಜನೆ ಪೂರ್ಣ ಆಗುವುದಿಲ್ಲ ಎಂದು ಹೇಳಿದ್ದಾರೆ. ಈಗಾಗಲೇ ಅದಕ್ಕೆ ಸಂಬಂಧಪಟ್ಟ ಕಾಮಗಾರಿಕೆಗಳನ್ನು ಕೈಗೆತ್ತಿಕೊಂಡು ಅನೇಕ ತಾಲ್ಲೂಕುಗಳಲ್ಲಿ ಕಾಲುವೆಗಳನ್ನು ತೋಡಿದ್ದಾರೆ, ರಚನೆ ಮಾಡಿದ್ದಾರೆ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ರೈತರು ಈಗಾಗಲೇ ಬಹಳ ವರ್ಷಗಳಿಂದ ಅದರ ದಾರಿ ಕಾಯುತ್ತಿದ್ದಾರೆ. ಆದಕಾರಣ ಇದಕ್ಕೆ ಪ್ರಥಮ ಆದ್ಯತೆ ಕೊಟ್ಟು, ತೀವ್ರವಾಗಿ ಇದನ್ನು ಮುಗಿಸಿ ಉತ್ತರ ಕರ್ನಾಟಕದ ಮೂರು ಜಿಲ್ಲೆಗಳಿಗೆ ನೀರು ದೊರಕುವಂತೆ ಮಾಡಿಕೊಡಬೇಕೆಂದು ಮಾನ್ಯ ಸಚಿವರಾದ ನಾಗೇಗೌಡರಲ್ಲಿ ನಾನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ನಾನು ಲೇಟೆಸ್ಟ್ ಪೊಸಿಶನ್ನನ್ನು ಕೊಟ್ಟರೆ, ಮಾನ್ಯ ಸದಸ್ಯರು ಚರ್ಚೆ ಮಾಡಲು ಅನುಕೂಲವಾಗುತ್ತದೆ. ಆದಕಾರಣ ಅದನ್ನು ಕೊಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸದಸ್ಯರು ಏನು ಹೇಳಿದರೋ ಅದರ ಪ್ರಕಾರ ಸುಮಾರು 8.52 ಟಿ.ಎಂ.ಸಿ.ಯಷ್ಟು ನೀರು ಮಲಪ್ರಭಾಗೆ ಶಾರ್ಟೇಜ್ ಇದೆ. ಇಲ್ಲಿ 2 ಲಕ್ಷದ 80 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗಬೇಕಾಗಿತ್ತು ಎನ್ನುವುದೂ ತಮಗೆ ತಿಳಿದಿರುವ ವಿಷಯ. ಲಿಫ್ಟ್ ಬ್ಯಾಂಕ್ ಕ್ಯಾನಲ್ 168 ಕಿ.ಮೀ.ಇದ್ದು ಕಂಪ್ಲೀಟ್ ಆಗಿರುವುದು 120 ಕಿ.ಮೀ, ನಾನು ಖುದ್ದಾಗಿ ಬಾದಾಮಿಗೆ ಹೋದಾಗ ನೋಡಿಕೊಂಡು ಬಂದಿದ್ದೇನೆ. ರೈಟ್ ಬ್ಯಾಂಕ್ ಕ್ಯಾನಲ್‌ನಲ್ಲೂ ಸಹಿತ 130 ಕಿ.ಮೀಗೆ ಅಂದಾಜು ಮಾಡಿ, 110 ಕಿ.ಮೀ. ಮಾತ್ರ ತೆಗೆದಿರತಕ್ಕಂಥದ್ದು ಮತ್ತು ಈ ಭಾಗಕ್ಕೇ ನೀರಿಲ್ಲ ಎನ್ನುವಂಥದ್ದು ಬಹಳ ವಿಷಾದಕರ, ಆದ್ದರಿಂದ ಇದರಲ್ಲಿ ಒಂದೇ ಒಂದು ವಿಚಾರವೇನೆಂದರೆ, ದಿನಾಂಕ 03-08-94ರ ಗೋವಾ ಮುಖ್ಯ ಮಂತ್ರಿಯಾದ ಶ್ರೀ ವಿಲ್ಫರ್ಡ್ ಡಿಸೋಜಾರವರು ಮತ್ತು ಅಂದಿನ ಮುಖ್ಯಮಂತ್ರಿಯಾಗಿದ್ದ ಶ್ರೀ ವೀರಪ್ಪಮೊಯಿಲಿಯವರು ಒಂದು ಸಭೆ ನಡೆಸಿ ಒಂದು ಕನ್‌ಕ್ಲುಶನ್‌ಗೆ ಬಂದಿದ್ದಾರೆ. ತದನಂತರ ಏನು ಮಹದಾಯಿ ಡೈವರ್ಶನ್ ಇದೆ ಅದು ಮಲ್ಟಿಪರ್ಪಸ್. ಇದರಲ್ಲಿ 4 ಟಿ.ಎಂ.ಸಿ.ಯಷ್ಟು ನೀರನ್ನು ಉಪಯೋಗಿಸಿಕೊಂಡು 345 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ನಮ್ಮ ಇಂದಿನ ಮುಖ್ಯಮಂತ್ರಿಯಾಗಿರತಕ್ಕಂಥ ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರು ಅವೊತ್ತು ವಿದ್ಯುತ್ ಖಾತೆ ಮಂತ್ರಿಯಾಗಿದ್ದಾಗ, ಮತ್ತು ಬೊಮ್ಮಾಯಿಯವರು

ಮುಖ್ಯಮಂತ್ರಿಯಾಗಿದ್ದಾಗ, ಇಬ್ಬರೂ ಅಲ್ಲಿಗೆ ಹೋಗಿ, ಒಂದು ರೌಂಡ್ ಚರ್ಚೆ ಮಾಡಿ ಬಂದಿದ್ದಾರೆ. ಹಿಂದೆ ವೀರಪ್ಪಮೊಯಿಲಿಯವರೂ ಕೂಡ ಚರ್ಚೆ ಮಾಡಿ ಬಂದಿದ್ದಾರೆ. ತದನಂತರ ಶ್ರೀ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ದಿನಾಂಕ 20-2-96ರಂದು ಪ್ರತಾಪ್ ಸಿಂಗ್ ರಾಣೆಯವರಿಗೆ ಒಂದು ಕಾಗದವನ್ನು ಬರೆದು ನೀವು ನಮಗೆ ಅನುಮತಿಯನ್ನು ಕೊಡಬೇಕೆಂದು ಗೋವಾಕ್ಕೆ ಪತ್ರವನ್ನು ಬರೆದಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಇದು ಇಂಟರ್ ಸ್ಟೇಟ್ ರಿವರ್, ಅವರು ನೀರು ಉಪಯೋಗಿಸಬೇಡಿ ಎಂದು ಅಬ್ಜೆಕ್ಷನ್ ಹಾಕಿಲ್ಲ, ಏನು ನಾವು 9 ಟಿ.ಎಂ.ಸಿ ನೀರನ್ನು ಉಪಯೋಗಿಸುತ್ತಿದ್ದೆವೋ ಇದರಲ್ಲಿ ಕಳಸಾದಿಂದ 3.34, ಅಲತಾರ್ ದಿಂದ 0.56, ಪೋಟ್ಲಿಯಿಂದ 1.105 ಈ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್ ಎಲ್ಲಿ ಮಾಡುತ್ತಿದ್ದೇವೆಂದು ಹೇಳಿದರೆ ನಮ್ಮ ಪೋರ್ಟ್‌ನಲ್ಲಿ. ಅವೆರಡಕ್ಕೆ ಏನಾಗಿದೆ ಎಂದು ಹೇಳಿದರೆ ಅಲ್ಲಿ ಬರತಕ್ಕಂಥ ವಾಟರ್ ಹೋಗಿ, ಫಿಶಿಂಗ್‌ಗೇ ಮತ್ತು ಬೋಟಿಂಗ್‌ಗೇ ತೊಂದರೆಯಾಗುತ್ತಿದೆ ಎನ್ನುವುದೇ ಗೋವಾದವರ ಅನಿಸಿಕೆ. ಅದಕ್ಕೆ ಏನು ಹೇಳಿದರು ನಾಗಪುರದಲ್ಲಿ ನಮ್ಮ ನ್ಯಾಶನಲ್ ಎನ್‌ವೈರ್ನ್‌ಮೆಂಟ್ ಇ,ಜಿನಿಯರಿಂಗ ರೀಸರ್ಚ್ ಏನಿದೆ ಅವರಿಗೆ 14 ತಿಂಗಳು ಕಾಲ ಟೈಮ್ ಕೊಟ್ಟು, ಇದರ ಬಗ್ಗೆ ಚರ್ಚೆ ಮಾಡಿ ಎಂದು ಹೇಳಿದ್ದಾರೆ. ಒಂದು ಇಂಟರೀಮ್ ರಿಪೋರ್ಟ್‌ನ್ನು ನಮ್ಮ ಕೆ.ಪಿ.ಸಿಯವರಿಗೆ ಸಬ್‌ಮಿಟ್ ಮಾಡಿದ್ದಾರೆ. ಮೊನ್ನೆ ನಮ್ಮ ಮುಖ್ಯಮಂತ್ರಿಗಳು ನನ್ನನ್ನು ಕರೆಸಿ, ಕೆ.ಪಿ.ಸಿ.ಯವರ ಜೊತೆ ಚರ್ಚೆಯನ್ನು ಮಾಡಿದ್ದಾರೆ. ಆ ಮಧ್ಯಂತರ ವರದಿ ಫೇವರಬಲ್ ಅಗಿದೆ 14 ತಿಂಗಳು ಟೈಮ್ ಇರುವುದು, ಇನ್ನು ಎರಡು ತಿಂಗಳೊಳಗೆ ಅಥವಾ ಇನ್ನೂ ಬೇಗ ಆದರೂ ಆ ವರದಿ ಬರಬಹುದು, ಈ ಮಧ್ಯೆ ಈ ತಿಂಗಳ 28ನೇ ತಾರೀಖು ಅಥವಾ 29ನೇ ತಾರೀಖೇ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲ್‌ರವರು ಗೋವಾ ರಾಜ್ಯದ ಮುಖ್ಯಮಂತ್ರಿಗಳ ಜೊತೆ ಸಭೆಯನ್ನು ನಡೆಸುವುದಕ್ಕೆ ಈ ವಾರದಲ್ಲೇ ವ್ಯವಸ್ಥೆ ಮಾಡಿಕೊಂಡಿದ್ದೇವೆ. ನಿನ್ನೆಯಿಂದ ನಾವು ಪ್ರತಾಪ್‌ರಾಣೆಯವರಿಗೆ ಈ ಬಗ್ಗೆ ಸಮಯವನ್ನು ಮಾಡಿಕೊಳ್ಳುವುದಕ್ಕೆ ಕೇಳಿಕೊಳ್ಳುತ್ತಿದ್ದೇವೆ. ಈ ತಿಂಗಳ 30ರೊಳಗೆ ಟೈಮ್ ಸಿಕ್ಕಿದರೆ ಮತ್ತು ಅವರೂ ಕೂಡ ಸಮಯವನ್ನು ಮಾಡಿಕೊಂಡರೆ, ನಾವು ಟಾಪ್ ಪ್ರಯಾರಿಟಿ ಮೇಲೆ ಹೋಗಿ ಗೋವಾ ಸರ್ಕಾರದವರನ್ನು ಕನ್‌ವಿನ್ಸ್ ಮಾಡಿ, ಈ ಪ್ರಾಜೆಕ್ಟ್ 200 ಕೋಟಿ ರೂ.ಗಳ ಮೇಲೆ ಆಗುತ್ತದೆ. 354 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆ ಈ 4 ಟಿ.ಎಂ.ಸಿಯಲ್ಲಿ ಮಾಡುವುದು ದೊಡ್ಡ ವಿದ್ಯುಚ್ಛಕ್ತಿ ಉತ್ಪಾದನೆಯಾಗಿರುತ್ತದೆ. ಇದು ಮಲ್ಟಿಪರ್ಪಸ್ ಆಗಿರುವುದರಿಂದ ಗೋವಾಕ್ಕೆ ಹೋಗಬೇಕೆಂದು ನಿನ್ನೆ ನಾನು ಮತ್ತು ಮುಖ್ಯಮಂತ್ರಿಗಳು ತೀರ್ಮಾನ ಮಾಡಿದ್ದೇವೆ. ಅವರು ನನಗೆ ಈಗಾಗಲೇ ಹೇಳಿದ್ದು ಆಫೀಸ್‌ನಲ್ಲಿ ಕೆಲಸಗಳು ನಡೆಯುತ್ತಿದ್ದು ಇನ್ನು ಒಂದೆರಡ್ಮೂರು ದಿವಸಗಳಲ್ಲಿ ಗೋವಾಕ್ಕೆ ಹೋಗಬೇಕೆಂದು ಯೋಚನೆ ಮಾಡಿದ್ದೇವೆ. ಈ ವಾರದಲ್ಲೇ ಹೋಗಿ ಗೋವಾ ಮುಖ್ಯಮಂತ್ರಿಗಳನ್ನು ನೋಡಿ ಅವರ ಮುಂದೆ ನೀರಾವರಿಗೆ ಸಂಬಂಧಪಟ್ಟ ಈ

ವಿಷಯವನ್ನು ಇಟ್ಟು ಅವರನ್ನು ಕನ್‌ವಿನ್ಸ್ ಮಾಡಿ ಅವರ ಪ್ರಾಜೆಕ್ಟ್ ಕ್ಲಿಯರ್ ಮಾಡಿಕೊಂಡು ಬಂದು 9 ಟಿ.ಎಂ.ಸಿ. ನೀರನ್ನು ನಾವು ಮಲಪ್ರಭಾಗೆ ಬಿಟ್ಟು 2 ಲಕ್ಷದ 80 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಏನು ನೀರಾವರಿ ತೊಂದರೆಯಾಗಿದೆ ಅದನ್ನು ನಿವಾರಣೆ ಮಾಡಬೇಕಾಗುತ್ತದೆ. ಈ ವರ್ಷದಲ್ಲೇ ಇದನ್ನು ಮಾಡಿ ಇದಕ್ಕೆ ಒಂದು ಸ್ವರೂಪವನ್ನು ಕೊಡಬೇಕೆಂದು ಮುಖ್ಯಮಂತ್ರಿಗಳು ನಿನ್ನೆಯ ಮೀಟಿಂಗ್‌ನಲ್ಲಿ ಹೇಳಿದ್ದಾರೆ. ಆದಷ್ಟು ಬೇಗ ಗೋವಾ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಸಮಸ್ಯೆಯನ್ನು ಬಗೆಹರಿಸುತ್ತೇವೆ. ತದನಂತರ ಇಲ್ಲಿ ಟೆಕ್ನಿಕರ್ ಪ್ರಾಬ್ಲಮ್ಸ್ ಯಾವುದೂ ಇಲ್ಲಿ ಇಲ್ಲ. ವಾಟರ್ ಅವೈಲಬಲ್ ಇದೆ, ದುಡ್ಡು ಕೊಡುವುದಕ್ಕೆ ತಯಾರಾಗಿದ್ದೇವೆ, ಈಗಿರತಕ್ಕಂಥ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗೆ ಬೆಸ್ಟ್ ಪ್ರಾಜೆಕ್ಟ್ ಆಗುತ್ತದೆ. ಈಗ ಇರತಕ್ಕಂಥದ್ದು ಒಂದು ಸಣ್ಣ ಸಮಸ್ಯೆ ಅಷ್ಟೆ. ಗೋವಾದವರೇನೂ ನೀರನ್ನು ಉಪಯೋಗಿಸಬೇಡಿ ಎಂದು ಹೇಳುತ್ತಿಲ್ಲ. ಈ ಡೈವರ್ಶನ್ ಆಗುವುದರಿಂದ ಫಿಶಿಂಗ್‌ಗೆ ಮತ್ತು ಬೋಟಿಂಗ್‌ಗೆ ತೊಂದರೆಯಾಗುತ್ತಿದೆ ಎನ್ನುತ್ತಿದ್ದಾರೆ. ಅದನ್ನು ಸರಿಯಾದ ರೀತಿಯಲ್ಲಿ ತಿಳಿಸಿ, ಅವರನ್ನು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರು ಕನ್‌ವಿನ್ಸ್ ಆಗುತ್ತಾರೆ ಎಂದು ನಾವು ಅಂದುಕೊಂಡಿದ್ದೇವೆ. ಆದ್ದರಿಂದ ಇದರ ಬಗ್ಗೆ ಯಾವುದೇ ರೀತಿಯ ಅನುಮಾನಗಳು ಬೇಡ. ಇನ್ನು ಮೂರ್ನಾಲ್ಕು ತಿಂಗಳಲ್ಲಿ...

ಶ್ರೀ ವಿ.ಎಸ್.ಕೌಜಲಗಿ:- ಮಾನ್ಯ ಉಪಾಧ್ಯಕ್ಷರೇ, ಈಗ ನೀರಾವರಿ ಮಂತ್ರಿಗಳು ಏನು ಹೇಳಿದರು ಇದು ಸುಮಾರು ವರ್ಷಗಳಿಂದ ಇದು ಚರ್ಚೆಯಾಗುತ್ತಲೇ ಬಂದಿದೆ. ಈ ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿದಂಥ ನದಿಗಳು ಪಶ್ಚಿಮ ದಿಕ್ಕಿಗೆ ಹೋಗುವಂಥ ಈ ಮೂರು ಹೊಳೆಗಳು ಇವೆ. ನಮ್ಮ ರಾಜ್ಯದಲ್ಲಿ ಹುಟ್ಟಿ ನೀರು ಗೋವಾ ಕ್ಷೇತ್ರದಲ್ಲಿ ಹೋಗುತ್ತದೆ. ಈ ನೀರನ್ನು ಉಪಯೋಗ ಮಾಡುವುದಕ್ಕೆ ಯಾವುದೇ ತೊಂದರೆ ಇಲ್ಲ. ಕೇವಲ ಅವರು ಏನು ಮಾಡುತ್ತಾರೆಂದರೆ ಈ ಮಹದಾಯಿ ರಿವರ್ ಅಲ್ಲಿ ಮಾಂಡವಿ ರಿವರ್ ಸಮುದ್ರವನ್ನು ಕೂಡುವಂಥ ಸ್ಥಳದಲ್ಲಿ ಉತ್ಪಾದನೆ ಹೆಚ್ಚಾಗುತ್ತದೆ. ಅದಕ್ಕೆ ಅವರು ಆಕ್ಷೇಪ ಎತ್ತಿದ್ದಾರೆ. ಅದರೆ ನಿಜವಾಗಿ ನೀರಿನ ಸದುಪಯೋಗ ಬಾಳೇಕುಂದ್ರಿಯವರ ರಿಪೋರ್ಟ್‌ನಲ್ಲಿ ರೇಣುಕಾ ಜಲಾಶಯದ ಬಗ್ಗೆ ಏನು ಹೇಳಿದ್ದಾರೆ, ಅದರಲ್ಲಿ ಈ ಮಹದಾಯಿ ತುಂಬಿದ ನಂತರವೇ ಇದು ಸಫಲ್ ಆಗುತ್ತದೆ ಎನ್ನುವ ವರದಿ ಇದೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದನ್ನು ನಾವು ಅಳವಡಿಸದೇ ಬರೀ ರೇಣುಕಾ ಜಲಾಶಯ ಉಪಯೋಗ ನಮಗೆ ಆಗುವುದಿಲ್ಲ. ಎಂ.ಎಲ್.ಬಿ.ಸಿ.ಯಿಂದ ಸಾಕಷ್ಟು ನೀರಾವರಿಗೆ ಹೋಗುವುದಿಲ್ಲ, ಎಂ.ಆರ್.ಬಿ.ಸಿಯಿಂದ ಹೋಗುವುದಿಲ್ಲ. ಈ 9 ಟಿ.ಎಂ.ಸಿ. ನೀರನ್ನು ಯಾವುದೇ ದೃಷ್ಟಿಯಲ್ಲಿ ಯಾವುದೇ ಪರಿಸ್ಥಿತಿಯಲ್ಲಿ ತಾವು ಈ ರೇಣುಕಾ ಜಲಾಶಯಕ್ಕೆ ಬಿಡಬೇಕು. ಇದರಲ್ಲಿ ತಾವು ಹೇಳಿದ ಹಾಗೆ 350 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಇದೆ. ಅದಕ್ಕೆ ಸಾಕಷ್ಟು ದುಡ್ಡಿನ ಅನುಕೂಲತೆಯನ್ನು ತಾವು ಮಾಡಿಲ್ಲ, ಕಳೆದ ವರ್ಷ 50 ಲಕ್ಷ ಕೊಟ್ಟಿರಿ, ಈ ವಷರ 50 ಲಕ್ಷ ಏನೋ ಪ್ರಾವಿಶನ್ ಮಾಡಿದ್ದೀರಿ. ಆದರೆ ಕುಳಕುಂಬಿ ಹತ್ತಿರ ತಮ್ಮ ಆಫೀಸ್ ಕಟ್ಟಿದ್ದೀರಿ. ಈ ಒಂದು

ಮಹದಾಯಿ ಜಲ, ನೀರು ಏನಿದೆ ಇದು ಬಹಳ ಪ್ರಾಮುಖ್ಯವಿದೆ. ವಿದ್ಯುತ್ ಉತ್ಪಾದನೆಗೆ ಆಯಿತು, ನೀರಾವರಿಗೆ ಆಯಿತು. ನಾವು ಈಗ ಅವರನ್ನು ಕೇಳಿ ಪ್ರಾಜೆಕ್ಟ್‌ಗಳನ್ನು ಮಾಡುವ ಅವಶ್ಯಕತೆ ಇಲ್ಲ. ಹಿಂದೆಲ್ಲಾ ಜುರಾಲಾ ಬಗ್ಗೆ ಸಾಕಷ್ಟು ಚರ್ಚೆಗಳಾದವು, ಎಲ್ಲಾ ಕೇಳಿಯೇ ಅವರು ನಡೆದಿದ್ದಾರೆ. ನಮ್ಮಲ್ಲಿದ್ದ ಹೊಳೆಗಳ ಉಪಯೋಗವನ್ನು ನಾವು ಮಾಡಿಕೊಳ್ಳುವುದಕ್ಕೆ ನೀವು ಇನ್ನೂ ಮುತುವರ್ಜಿ ವಹಿಸುತ್ತಿಲ್ಲ, ಇದು ಸರಿಯಲ್ಲ. ಅದಷ್ಟು ಬೇಗ ಮಾನ್ಯ ಮಂತ್ರಿಗಳು ಹೋಗಿ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಶಿವಾನಂದ ಪಾಟೀಲ್ ಸಿದ್ರಾಮಪ್ಪ:- ಸನ್ಮಾನ್ಯ ಉಪಾಧ್ಯಕ್ಷರೇ, ಈ ಯೋಜನೆ ಬೆಳಗಾಮ್ ಮತ್ತು ಧಾರವಾಡ ಜಿಲ್ಲೆಯವರಿಗೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟೇ ಅವಶ್ಯಕತೆ ಬಿಜಾಪುರ ಜಿಲ್ಲೆಯವರಿಗೂ ಇದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ನಾನು ತಿಳಿದುಕೊಳ್ಳುತ್ತೇನೆ. ಏಕೆಂದರೆ ನಮಗೂ ಕೂಡ ಪದೇಪದೇ ನೀರು ಬೇಕಾದರೆ ಈ 'ಕೊಯಿನಾ' ಡ್ಯಾಮ್‌ನಿಂದ ನೀರು ತರುವುದಕ್ಕೆ ಮೊನ್ನೆ ಕೂಡ ಸರ್ಕಾರ ಒಂದು ಕೋಟಿ ರೂಪಾಯಿ ಕೊಟ್ಟು ಬಿಜಾಪುರಕ್ಕೆ ಕುಡಿಯುವ ನೀರನ್ನು ತರತಕ್ಕಂಥ ವ್ಯವಸ್ಥೆಯನ್ನು ಮಾಡಿದೆ. ಇದು ಅಷ್ಟು ಅವಶ್ಯಕವಾದಂಥ ಯೋಜನೆಯಾಗಿದೆ. ಈ ಯೋಜನೆ ಮಾಂಡವಿ ರಿವರ್ ಪೆರಿನಿಯಲ್ ಸೋರ್ಸ್ ಇದೆ, ಅಲ್ಲಿ ಪರಿಸರಕ್ಕೆ ಹಾನಿಯಾಗುತ್ತದೆ ಎನ್ನತಕ್ಕಂಥ ವಿಚಾರವನ್ನು ಸನ್ಮಾನ್ಯ ನಾಗೇಗೌಡರು ಎತ್ತಿದರು. ಆದರೆ ಈ 9 ಟಿ.ಎಂ.ಸಿ. ನೀರನ್ನು ತೆಗೆದುಕೊಂಡಮೇಲೂ ಕೂಡ 'ಮಾಂಡವಿ' ಗೆ 3 ಟಿ.ಎಂ.ಸಿ. ನೀರು ಉಳಿಯುತ್ತದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರಿಂದ ಪರಿಸರಕ್ಕೆ ಯಾವುದೇ ಹಾನಿಯಾಗುವುದಿಲ್ಲ. ಬೋಟಿಂಗ್ ಮತ್ತು ಫಿಶಿಂಗ್‌ಗೂ ಕೂಡ ಇದರಲ್ಲಿ ಯಾವುದೇ ಹಾನಿಯಾಗುವ ಯೋಜನೆ ಇಲ್ಲ. ಆ ಪ್ರಶ್ನೆ ಇದರಲ್ಲಿ ಉದ್ಭವಾಗುವುದಿಲ್ಲ. ಅದಷ್ಟು ತೀವ್ರವಾಗಿ ಇದನ್ನು ಮಾಡಿಕೊಟ್ಟಿದ್ದೇ ಆದರೆ ಈ ಮೂರು ಜಿಲ್ಲೆಗಳಿಗೂ ಕೂಡ ಇದೊಂದು ವರದಾನವಾಗುತ್ತದೆ. ನೀವು ಮತ್ತೆ 14 ತಿಂಗಳು ಕಾಲ ವರದಿ ಒಪ್ಪಿಸುವುದಕ್ಕೆ ಸಮಯಾವಕಾಶ ಕೊಟ್ಟಿದ್ದೇವೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಇದು ನಿಮ್ಮ ಗಮನಕ್ಕೆ ಬಂದಾಗಿಯೂ ಕೂಡ 1972ರಲ್ಲಿ ಈ ಯೋಜನೆ ಪೂರ್ಣಗೊಂಡಿದ್ದರೂ ಎಷ್ಟು ನೀರನ್ನು ನಾವು ಸಂಗ್ರಹಣೆ ಮಾಡಬೇಕಾಗಿತ್ತೋ ಅದನ್ನು ನಾವು ಇಲ್ಲಿಯವರೆವಿಗೂ ಮಾಡಿಲ್ಲ. 1972ರಿಂದಲೂ ಸರ್ಕಾರದ ಗಮನದಲ್ಲಿ ಈ ವಿಷಯ ಇದ್ದರೂ ಕೂಡ ತಾವು ಇಲ್ಲಿಯವರೆವಿಗೂ ವರದಿ ತರಿಸಿಕೊಳ್ಳುವುದರಲ್ಲೇ ಇರುವುದರಿಂದ ದಯವಿಟ್ಟು ತಾವು ಈ ಬಗ್ಗೆ ತ್ವರಿತವಾಗಿ ಕ್ರಮವನ್ನು ತೆಗೆದುಕೊಳ್ಳಬೇಕಾದುದು ಬಹಳ ಅಗತ್ಯವಿದ್ದು, ಆ ಕೆಲಸವನ್ನು ಬೇಗ ಮಾಡಬೇಕೆಂದು ಹೇಳಲಿಚ್ಛಿಸುತ್ತೇನೆ.

ಶ್ರೀ ಸಿ.ಎಸ್.ನಾಯಕ್ (ಗೋಕಾಕ್):- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಸರ್ಕಾರ ನೀರಾವರಿಗೆ ಕೊಟ್ಟಷ್ಟು ಒತ್ತು ಬೇರೆ ಯಾರೂ ಕೊಟ್ಟಿಲ್ಲ. ಆದರೆ, ಮಲಪ್ರಭಾ

ನೀರಾವರಿ ಯೋಜನೆ ವಿವಿಧೋದ್ದೇಶ ಯೋಜನೆ ಅಲ್ಲ. ಅದು ಕೇವಲ ನೀರಾವರಿಗೆ ಮಾತ್ರ. ಖಾನಾಪುರ ತಾಲ್ಲೂಕಿನಲ್ಲಿ ಪಶ್ಚಿಮ ಘಟದಲ್ಲಿ ಈ ಮಲಪ್ರಭಾ ನದಿ ಮತ್ತು ಮಹದಾಯಿ ನದಿ ಹುಟ್ಟತ್ತವೆಂದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಆದರೆ ಈ ನದಿಗಳು ಒಂದಕ್ಕೊಂಡು ವಿರುದ್ಧ ದಿಕ್ಕಿನಲ್ಲಿ ಹರಿಯುತ್ತವೆ. ಮಹದಾಯಿ ನದಿ ಪಶ್ಚಿಮ ದಿಕ್ಕಿನಲ್ಲಿ ಹರಿಯುತ್ತದೆ, ಮಲಪ್ರಭಾ ನದಿ ಪೂರ್ವ ದಿಕ್ಕಿನಲ್ಲಿ ಹರಿಯುತ್ತದೆ. ಇಂಥ ಒಂದು ವಿಷಯದೊಳಗೆ ಕೇವಲ ಕೆಲವೇಕೆಲವು ಮೀಟರ್‌ಗಳಲ್ಲಿ ಆ ಮಹದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಿಸುವುದರಿಂದ ಮಲಪ್ರಭಾ ನದಿಯ ಒಂದು ಯೋಜನೆ ಸಫಲವಾಗುತ್ತದೆ ಎನ್ನುವಂಥ ಮಾತನ್ನು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿ ಎಷ್ಟೋ ಹಳ್ಳಿಗಳನ್ನು ಮುಳುಗಿಸಿ ನೀರಾವರಿಗೆ ಅನುಕೂಲವಾಗಲೀ ಎನ್ನುವಂಥ ದೃಷ್ಟಿಯಲ್ಲಿ ಈ ಮಲಪ್ರಭಾ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಈ ಒಂದು ದಿಸೆಯೋಳಗೆ, ಆಗಸ್ಟ್ ತಿಂಗಳು ಬಂದರೂ ಕೂಡ ಮಲಪ್ರಭಾ ಅಣೆಕಟ್ಟೆಗೆ ನೀರಿಲ್ಲ. ಇದರಿಂದ ರೈತರು ಕಂಗಾಲಾಗಿದ್ದಾರೆ. ಅಲ್ಲಿ ಮಳೆಯೂ ಇಲ್ಲ, ಇಲ್ಲಿ ನೀರೂ ಇಲ್ಲ, ಆ ನದಿ ಕೂಡ ಇಲ್ಲಿಗೆ ಬಂದು ಸೇರಲಿಲ್ಲ ಎನ್ನುವಂಥ ಮಾತನ್ನು ಹೇಳಿದರೆ ತಪ್ಪಾಗಲಾರದು. ಗಂಗಾ ನದಿಯನ್ನು ಕಾವೇರಿಗೆ ಕೂಡಿಸುವಂಥ ಯೋಜನೆಗೆ ಇಟ್ಟಾಗ, ಕೇವಲ ಕೆಲವೇ ಕೆಲವು ಮೀಟರ್‌ಗಳಲ್ಲಿ ಇದ್ದಂಥ ಮಹದಾಯಿ ನದಿಯನ್ನು ಏಕೆ ಮಲಪ್ರಭಾ ನದಿಗೆ ಸೇರಿಸಬಾರದು? ಅದಕ್ಕಾಗಿ ಕೇವಲ 50 ಲಕ್ಷ ರೂ.ಗಳನ್ನು ಈ ಬಾರಿಯ ಬಜೆಟ್‌ನಲ್ಲಿ ಅನುದಾನವನ್ನು ಇಡಲಾಗಿದೆ. ಆದರೆ ಆ ಮಾತುಕತೆ ನಂತರ ಆದರೂ ಸಹ ಒಂದು ಒಪ್ಪಿಗೆಯನ್ನು ಪಡೆದು ಎರಡು ಸರ್ಕಾರಗಳು ಒಮ್ಮತದಿಂದ ಈ ಯೋಜನೆಯನ್ನು ಸಫಲಗೊಳಿಸುವಲ್ಲಿ ಯಶಸ್ವಿಯಾದರೆ ಕರ್ನಾಟಕ ರಾಜ್ಯದ ಬೆಳಗಾವಿ ಮತ್ತು ಧಾರವಾಡ ಎರಡು ಜಿಲ್ಲೆಯ ರೈತರಿಗೆ ನೀರಾವರಿಯಿಂದ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಿ, ಮಾನ್ಯ ನಾಗೇಗೌಡರಿಂದ ಸಮಾಧಾನಕರವಾಗಿ ಉತ್ತರ ಬಂದಿದೆ. ಅದಕ್ಕಾಗಿ ಯೋಗ್ಯ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿ, ರೈತರಿಗೆ ಅನುಕೂಲವಾಗುವ ದೃಷ್ಟಿಯಲ್ಲಿ ತೀವ್ರ ಯೋಜನೆಯನ್ನು ಕೈಗೊಂದು ಇದನ್ನು ಪೂರ್ತಿ ಮಾಡುವುದಕ್ಕೆ ಶ್ರಮಿಸಬೇಕು ಎಂದು ಹೇಳಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಬಸಂತಪ್ಪ ಬಸಪ್ಪ ಹಿರೇರೆಡ್ಡಿ (ರಾಮದುರ್ಗ):- ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನೀರಾವರಿ ಸಚಿವರು 30ನೇ ತಾರೀಖಿನೊಳಗಾಗಿ ಗೋವಾ ಸರ್ಕಾರದ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ, ಮಲಪ್ರಭಾ ನದಿಗೆ ಗೋವಾ ಸರ್ಕಾರದ ಒಪ್ಪಿಗೆ ಪಡೆದುಕೊಂಡು ಮಹಾದಾಯಿ ನೀರಿನ ಬಗ್ಗೆ ಒಂದು ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಮಾತು ಕೇಳಿ ಬಹಳ ನೆಮ್ಮದಿ ತಂದಿದೆ. ಆದರೆ ಎಷ್ಟೋ ಸಾರಿ ಈ ಸದನದಲ್ಲಿ ವಿಷಯ ಬಂದು ಈ ಮಹಾದಾಯಿ ನದಿಯ ಕಾರ್ಯ ಬಹಳ ವರ್ಷಗಳ ಹಿಂದೆಯೇ ಪ್ರಾರಂಭವಾಗಬೇಕಾಗಿತ್ತು. ಈಗ ಸಾಕಷ್ಟು ಜನರ ಒತ್ತಾಯ ಬಂದಾಗ ಈ ಸರ್ಕಾರ ಗೋವಾ ಸರ್ಕಾರದ ಜೊತೆ ಮಾತನಾಡಿ ಈ ಸಮಸ್ಯೆಯನ್ನು ಪರಿಹರಿಸತ್ತೇವೆಂದು

ಹೇಳಿದ್ದಾರೆ., ಈ ಕಾರ್ಯ ಆಗಬೇಕು. ಏಕೆಂದರೆ ನಮ್ಮ ರೈತರು ಬಹಳ ಕಂಗಾಲಾಗಿದ್ದಾರೆ ಎಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಮಲಪ್ರಭಾ ನೀರಾವರಿ ಯೋಜನೆ ಇವತ್ತಿನ ದಿವಸ ಹುಬ್ಬಳ್ಳಿ, ಧಾರವಾಡದ ಕುಡಿಯುವ ನೀರಿನ ಯೋಜನೆ ಸಲುವಾಗಿ ಆಗಿದೆ ಎನ್ನುವಂತಹ ಸಮಸ್ಯೆ ಹುಟ್ಟಿದೆ. ಏಕೆಂದರೆ ಈ ವರ್ಷದ ಜೂನ್‌ನಲ್ಲಿ ನೀರು ಬಿಡಬೇಕಾಗಿತ್ತು. ಇವತ್ತು ಜುಲೈ 23 ಆದರೂ ಸಹ ನಮ್ಮ ತಾಲ್ಲೂಕಿನಲ್ಲಿ ಲೆಫ್ಟ್ ಬ್ಯಾಂಕ್, ರೈಟ್ ಬ್ಯಾಂಕ್ ಇದ್ದರೂ ಕೂಡ ನೀರು ಬಿಟ್ಟಿಲ್ಲ. ಯಾವುದೇ ಭಾಗಕ್ಕೂ ಕೂಡ ನೀರು ಬಿಟ್ಟಿಲ್ಲ. ಆದರೆ ಈಗ ಬೆಳಗಾಂ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಇವತ್ತಿನ ದಿವಸ ಮಳೆಯಾಗಿಲ್ಲ. ಆದರೆ ಇದನ್ನೆಲ್ಲಾ ನೋಡಿದಾಗ ಮಹಾದಾಯಿ ನದಿ ನೀರು ಮಲಪ್ರಭಾದಿಂದ ಜೋಡಿಸಿಲ್ಲ ಎಂದರೆ ಈ ಮಲಪ್ರಭಾ ನೀರಾವರಿ ಯೋಜನೆ ನಿಷ್ಪಲವಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದಕ್ಕೆ ನಾವು ಮುಖ್ಯಮಂತ್ರಿಗಳ ಮತ್ತು ನೀರಾವರಿ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಯೋಜನೆಯನ್ನು ಎಷ್ಟು ಸಾಧ್ಯವೋ ಅಷ್ಟು ಶೀಘ್ರವಾಗಿ ಪ್ರಯತ್ನ ಮಾಡಿ ಕಾರ್ಯಗತ ಮಾಡಬೇಕು. ನಮ್ಮವರೇ ಆದಂತಹ ಪ್ರಧಾನ ಮಂತ್ರಿಗಳು ಕೇಂದ್ರದಲ್ಲಿ ಇದ್ದಾಗ, ಹಣಕಾಸಿನ ಒಪ್ಪಿಗೆ ಪಡೆಯುವುದು ತೊಂದರೆ ಆಗಲಿಕ್ಕಿಲ್ಲ. ಅದಕ್ಕೆ ಮಾನ್ಯ ಸಚಿವರು ಈ ಸದನದಲ್ಲಿ ಆಶ್ವಾಸನೆ ಕೊಟ್ಟಂತೆ ಗಮನಹರಿಸಿ ಇನ್ನು ಈ ಕಾರ್ಯ 2-3 ತಿಂಗಳಲ್ಲಿ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಸನ್ಮಾನ್ಯ ಸಚಿವರಲ್ಲಿ ಹಾಗೂ ಸಭಾನಾಯಕರಲ್ಲಿ ನನ್ನ ವಿನಂತಿ ಏನೆಂದರೆ ಈ ಮಹಾದಾಯಿ ಮಲಪ್ರಭಾ ಯೋಜನೆ ನನ್ನ ಕ್ಷೇತ್ರದಲ್ಲಿ ಬರುವುದರಿಂದ, ಇಲ್ಲಿ ಮಾನ್ಯ ಸದಸ್ಯರೆಲ್ಲರೂ ಸಹ ಇದರ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಅಲ್ಲಿ ಜೂನ್ ತಿಂಗಳ ಮೊದಲ ವಾರದಲ್ಲಿ ನೀರು ಬಿಡಬೇಕಾಗಿತ್ತು ಆದರೆ ಇವತ್ತು ಜುಲೈ 23ನೇ ತಾರೀಖು ಅದರೂ ನಮಗೆ ನೀರು ಬಿಟ್ಟಿಲ್ಲ. ಇವತ್ತು ನೀರಿನ ಮಟ್ಟ 4680 ಇದೆ. ಹೋದವರ್ಷನೀರಿನ ಮಟ್ಟ 52 ಮೇಲೆ ಇತ್ತು. ಹೋದವರ್ಷ ಜೂನ್ 15ನೇ ತಾರೀಖು ನೀರು ಬಿಟ್ಟಿದ್ದು, ಈ ವರ್ಷ ಬಿಟ್ಟಿಲ್ಲ. ಕಳೆದು 20 ವರ್ಷಗಳಲ್ಲಿ 4 ನೇ ಬಾರಿ ಈ ಜಲಾಶಯ ತುಂಬಿದೆ. ಈ ಯೋಜನೆ 48 ಟಿಎಂಸಿಯಿಂದ 36 ಟಿಎಂಸಿ ಆಗಿ ಒಟ್ಟು ಎರಡು ಲಕ್ಷ ಎಕರೆಗೆ ನೀರು ಬಾರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಿಂದೆ ಇದ್ದಂತಹ ಸರ್ಕಾರದಲ್ಲಿದ್ದ ಮಾನ್ಯ ಬೊಮ್ಮಾಯಿಯವರು, ಹಾಗೂ ಸನ್ಮಾನ್ಯ ಜೆ.ಹೆಚ್.ಪಟೇಲ್‌ರು ಗೋವಾದ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಸಾಕಷ್ಟು ಪ್ರಯತ್ನ ಮಾಡಿ ಎಲೆಕ್ಟ್ರಿಸಿಟಿ ಯೋಜನೆ ಸಫಲವಾಗಬೇಕು ಎಂದು ಮಾಡಿದ್ದಾರೆ. ನಾನು ಮೊನ್ನೆ ದಿವಸ ದೆಹಲಿಗೆ ಹೋಗಿ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾದಾಗ ವಿನಂತಿ ಮಾಡಿಕೊಂಡಿದ್ದೇನೆ. ಅವರು ಅದಷ್ಟು ಬೇಗ ಇದರ ಪರವಾನಗಿ ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ ಹಾಗೂ ದುಡ್ಡಿನ ವ್ಯವಸ್ಥೆಯನ್ನೂ ಕೂಡ ಮಾಡುತ್ತೇನೆಂದು ಹೇಳಿದ್ದಾರೆ. ಈ ಯೋಜನೆ ಕೂಡಲೇ ಆಗದಿದ್ದರೆ ನಿಷ್ಪಲವಾಗುತ್ತದೆ ಎನ್ನುವ ದೃಷ್ಟಿಯಿಂದ, ಈ ಯೋಜನೆಯನ್ನು ಬೇಗ ಪೂರ್ತಿ ಮಾಡಬೇಕು ಎಂದು

ವಿನಂತಿ ಮಾಡುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಉಪಾಧ್ಯಕ್ಷರೇ, ತಮ್ಮ ಆದೇಶದಂತೆ ಅದು ತಮ್ಮ ಕ್ಷೇತ್ರಕ್ಕೆ ಸೇರಿರುವುದು ಅಷ್ಟೇ ಅಲ್ಲ, ಇಡೀ ಜಿಲ್ಲೆಯ ಪ್ರಗತಿಗೆ ಸೇರಿದೆ. ನಾವು ನಿನ್ನೆ ಎಲ್ಲಾ ತರಿಸಿ ಎಷ್ಟು ನೀರು ಸ್ಟೋರ್ ಮಾಡಬಹುದು, ಎಷ್ಟು ಎಲೆಕ್ಟಿಸಿಟಿ ಉಪಯೋಗಿಸಿಕೊಳ್ಳಬಹುದು, ಎಷ್ಟು ಇರಿಗೇಷನ್‌ಗೆ ಉಪಯೋಗಿಸಿಕೊಳ್ಳಬಹುದು ಎಂದು ನೋಡಿ, ಎಲ್ಲಾ ವಿಚಾರ ಮಾಡಿದ್ದೇವೆ. ಅದಕ್ಕೆ ಒಂದು ಡೇಟ್ ಫಿಕ್ಸ್ ಮಾಡಬೇಕೆಂದು ಮಾನ್ಯ ನಾಗೇಗೌಡರು ನಾನು ಅದರ ಅವೇಲಬಿಲಿಟಿ ನೋಡಿಕೊಂಡು ಈ ತಿಂಗಳೊಳಗೆ ಅಥವಾ ಸಾಧ್ಯವಾದರೆ ವಾರದ ಒಳಗೆ ಅವರನ್ನು ಕಂಡು ಮಾತನಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ಗಮನ ಸೆಳೆಯುವ ಸೂಚನೆಯನ್ನು ನಾವು ಯಾರು ಕಳುಹಿಸಿಲ್ಲ. ಶೂನ್ಯವೇಳೆಯೂ ಇಲ್ಲ.

ಉಪಾಧ್ಯಕ್ಷರು:- ಇವತ್ತು ಶೂನ್ಯವೇಳೆ ಇಲ್ಲ ಎಂದು ಈಗಾಗಲೇ ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ನಾಳೆ ದಿವಸಕ್ಕೆ ಅದನ್ನು ವರ್ಗಾಯಿಸೋಣ.

ಶ್ರೀ ವಾಟಾಳ್ ನಾಗರಾಜ್:- ಅದಕ್ಕೆ ನಾವು ವಿರೋಧ ಮಾಡುತ್ತಿಲ್ಲ. ಪ್ರಶ್ನೆ ಏನಾಗಿದೆ ಎಂದರೆ ಗಮನ ಸೆಳೆಯುವ ಸೂಚನೆಯಲ್ಲಿ ಬಹಳ ಪ್ರಾಮುಖ್ಯವಾದ ವಿಚಾರ ಚರ್ಚೆಯಾಗುತ್ತಿದೆ. ನನ್ನ ಒಂದು ವಿಚಾರವಿತ್ತು, ಹೇಳಿ ಎಂದರೆ ಹೇಳುತ್ತೇನೆ. ಶೂನ್ಯ ವೇಳೆ ಇಲ್ಲದೆ ಇರುವುದರಿಂದ ಗಮನಸೆಳೆಯುವ ಸೂಚನೆಯಲ್ಲಿ ಅವಕಾಶ ಸಿಗಲಿ ಎಂದು.

ಉಪಾಧ್ಯಕ್ಷರು:- ಇನ್ನು ಗಮನ ಸಳೆಯುವ ಸೂಚನೆ ಮುಗಿದಿಲ್ಲ.

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಶಿವಾನಂದ ಪಾಟೀಲರು ಕೇಳಿದಂತಹ ಪ್ರಶ್ನೆಗೆ, 1992ನೇ ಇಸವಿಯಿಂದ ನಮ್ಮ ಸರ್ಕಾರ ಪ್ರಾರಂಭ ಮಾಡಬೇಕು ಎಂದು ಹೇಳಿದ್ದಕ್ಕೆ ದಿನಾಂಕ 30.8.1994ರಲ್ಲಿ ನಡೆದ ಕಾನ್‌ಫರೆನ್ಸ್‌ನಲ್ಲಿ ನಮ್ಮ ಕರ್ನಾಟಕ ಮತ್ತು ಗೋವಾ ಮುಖ್ಯಮಂತ್ರಿಗಳ ನಡುವೆ ನಡೆದಂತಹ ಮೀಟಿಂಗ್‌ನಲ್ಲಿ, and during the last visit of Sri M.S.Patil, the than Hon'ble Minister for Irrigation to Goa on 22-7-1992 ಅಲ್ಲೂ ಸಹ ಗೋವಾ ಮುಖ್ಯಮಂತ್ರಿಗಳು ಸಹ ಕನ್ಸೆಂಟ್ ಕೊಟ್ಟಿದ್ದಾರೆ. ಅವರು ಯಾವುದಕ್ಕೆ ಕನ್ಸೆಂಟ್ ಕೊಟ್ಟಿಲ್ಲ ಎಂದರೆ ಪರಿಸರದ ವಿಚಾರ ನೋಡಿ ಎಂದು ಹೇಳಿದ್ದಾರೆ. 1992 ಆದಮೇಲೆ 94ರಲ್ಲಿ ಮಾಡಿದ್ದಾರೆ. 1994 ಆದಮೇಲೆ ಪ್ರಿವಿಯಸ್ ಚೀಫ್ ಮಿನಿಸ್ಟರ್ ಮಾನ್ಯ ದೇವೇಗೌಡರು ಸಹ ಕಾಗದ ಬರೆದಿದ್ದು, ಇಮ್ಮಿಡಿಯಟ್ ಆಗಿ ಅವರೂ ಕಾಗದ ಬರೆದಿದ್ದಾರೆ. Karnataka Government hav approved the diversion of 9 TMC of

water from Madai to Melaprabha Project. ಕಾಗದ ಬರೆದು ಅವರು ಆಕ್ಷನ್ ತೆಗೆದುಕೊಂಡಿದ್ದಾರೆ. ಆದುದರಿಂದ ಅವರು ಒಂದು ಮಾತು ಹೇಳಿದ ಹಾಗೆ ಯಾವುದೇ ತಕರಾರು ಇಲ್ಲ. ಈಗಾಗಲೇ 14 ತಿಂಗಳು ಮುಗಿದು ಹೋಗಿದೆ. ಇನ್ನು ಉಳಿದಿರತಕ್ಕಂಥ 2-3 ತಿಂಗಳಲ್ಲಿ ಫೈನಲ್ ರಿಪೋರ್ಟ್ ಬರುತ್ತದೆ. ಇನ್ನು ಎರಡನೆಯದಾಗಿ ನಮಗೆ ಮುಳುಗಡೆ ಆಗತಕ್ಕಂಥಾದ್ದು ಎಲ್ಲಾ ಕರ್ನಾಟಕದ ಜಮೀನು. ಅಲ್ಲಿ ಮುಳುಗಡೆ ಆಗತಕ್ಕಂಥ ಜಮೀನು ಯಾವುದು ಇಲ್ಲ. ನಾನು ಮುಳುಗಡೆ ಆಗತಕ್ಕಂಥ ಪ್ರದೇಶವನ್ನು ಸಹ ತರಿಸಿದ್ದೇನೆ. ಕರ್ನಾಟಕದ 315 ಎಕರೆ ಜಮೀನು ಮುಳುಗಡೆ ಆಗುತ್ತದೆ. ಅದನ್ನೂ ಸಹ ನಮ್ಮ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು, ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರೂ ಎಲ್ಲಾ ಮಾಡಿದ್ದಾರೆ. ಅದೂ ಸಹ ನಮಗೆ ತಾಪತ್ರಯ ಇಲ್ಲ. ಇನ್ನು ಮೂರನೇ ವಿಚಾರವೇನೆಂದರೆ 9 ಟಿಎಂಸಿ ನೀರು ಆವೇಲಬಿಟಿಟಿ ಬಗ್ಗೆ ಸಹ ನಮಗೆ ಯೋಚನೆ ಇಲ್ಲ. ಅಲ್ಲಿ ಡೈವರ್ಷನ್ ಹಾಕಿ 44 ಟಿಎಂಸಿ ಬದಲು 51 ಟಿಎಂಸಿ ನೀರು ಗೋವಾಕ್ಕೆ ಪ್ಲೋ ಆಗುತ್ತದೆ. ಆದುರಿಂದ ನೀರಿನ ಬಗ್ಗೆ ತೊಂದರೆ ಇಲ್ಲ. 180 ಕೋಟಿ ಅಥವಾ 200 ಕೋಟಿ ರೂಪಾಯಿ ಆಗಲಿ ಅದನ್ನು ಅಪ್ರೂವ್ ಮಾಡಬೇಕು ಎನ್ನುವುದನ್ನು ಪ್ರಿನ್ಸಿಪಲಿ ಅಕ್ಸಪ್ಟ್ ಮಾಡಿದೆ. ನ್ಯಾಷನಲ್ ಎನ್‌ವಿರಾನ್‌ಮೆಂಟ್ ಎಂಜಿನಿಯರಿಂಗ್ ಇನ್ಸಿಟಿಟ್ಯೂಟ್‌ನವರು ಏನು ರಿಪೋರ್ಟ್ ಕೊಟ್ಟಿದ್ದಾರೆ, ಅದರ ಫೈನಲ್ ರಿಪೋರ್ಟ್ ಬಂದರೆ ಈ ವಾರದಲ್ಲಿ ನಾವು ಗೋವಾ ಮುಖ್ಯಮಂತ್ರಿಗಳ ಜೊತೆ ಒಂದು ಮೀಟಿಂಗ್ ಮಾಡಿ ಫೈನಲ್ ಮಾಡಿ ಕೊಡುತ್ತೇವೆ. ಅದರಲ್ಲಿ ಅನುಮಾನ ಬೇಕಾಗಿಲ್ಲ. ಮಲಪ್ರಭಾ ಯೋಜನೆ ಅಡಿ ಎರಡು ಲಕ್ಷದ 58 ಸಾವಿರ ಎಕರೆ ನೀರಾವರಿಗೆ ಏನು ತೊಂದರೆಯಾಗಿದೆ ಅದನ್ನು ಸಂಪೂರ್ಣವಾಗಿ ಸ್ಟೆಂಗ್ತನ್ ಮಾಡುವುದಕ್ಕೆ ನಾವು ಸಾಧ್ಯವಾದ ಎಲ್ಲಾ ಆಕ್ಷನ್ ತೆಗೆದುಕೊಳ್ಳುತ್ತೇವೆ. we will take all the possible steps.

ಶ್ರೀ ಬಿ.ಆರ್.ಯಾವಗಲ್:- ಮಾನ್ಯ ಉಪಾಧ್ಯಕ್ಷರೆ, ನೀರಾವರಿ ಸಚಿವರಲ್ಲಿ ಒಂದು ಬಿನ್ನಹ ಮಾಡುತ್ತೇನೆ, ತಾವು ಈ ವರ್ಷವೇ ಕೆಲಸ ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ತಮಗೆ ಬಿನ್ನಹ ಮಾಡುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ:- ನನಗೆ ನಂಬಿಕೆ ಇದೆ, ನಿನ್ನೆಯೂ ಕೂಡ ಮೀಟಿಂಗ್ ಮಾಡಿದ್ದೇವೆ, ನಮ್ಮ ವಿದ್ಯುತ್ ಖಾತೆಯನ್ನು ಮುಖ್ಯ ಮಂತ್ರಿಗಳೇ ಹೊತ್ತಿರುವುದರಿಂದ ಅವರೂ ನಾವು ಜೊತೆಗೂಡಿ ಸಭೆ ನಡೆಸಿದ್ದೇವೆ. ಪುನಃ ಗೋವಾದಲ್ಲೂ ನಮ್ಮ ಪ್ರಿಲಿಮನರಿ ಕನ್ಸಲ್ಟೇಷನ್‌ನಲ್ಲಿ ಫೇವರಬಲ್ ಆಗಿ ಬಂದಿದೆ. ಪ್ರಿಲಿಮೆನರಿ ರಿಪೋರ್ಟ್‌ನಲ್ಲೂ ಫೇವರಬಲ್ ಆಗಿ ಬಂದಿದೆ. ನೀರು ಇದೆ ಎನ್ನತಕ್ಕಂಥದ್ದು ಎಲ್ಲರಿಗೂ ಗೊತ್ತಿರತಕ್ಕಂಥದ್ದು ಸಬ್‌ಮರ್ಷನ್ ಕರ್ನಾಟಕದ್ದೇ ಆಗುವುದರಿಂದ ನಾವೆಲ್ಲೂ ಹೋಗಬೇಕಾಗಿಲ್ಲ. ಇನ್ನು 3-4 ತಿಂಗಳಿನಲ್ಲಿ ಆ ಮೀಟಿಂಗ್ ಆದಮೇಲೆ ಈ ವರ್ಷ ಏನಾದರೂ ಮಾಡಿ ಅದಕ್ಕೆ ತಾತ್ವಿಕ ಒಪ್ಪಿಗೆಯನ್ನು ಕೊಡುವುದಕ್ಕೆ ನಾವು ಎಲ್ಲಾ

ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು:- ಈಗ ಶಿವಾನಂದ ಪಾಟೀಲ್ ರವರು 1995ನೇ ಸೆಪ್ಟೆಂಬರ್‌ನಿಂದ ಬಿಜಾಪುರ ಹಾಗೂ ರಾಜ್ಯದ ಇತರೆ ನಗರಸಭೆ : ಪುರಸಭೆಗಳಿಗೆ ಮನರಂಜನಾ ತೆರಿಗೆ ಹಾಗೂ ಸರ್‌ಚಾರ್ಜ್ ಆನ್ ಸ್ಟ್ಯಾಂಪ್ ಡ್ಯೂಟಿಯನ್ನು ಬಿಡುಗಡೆ ಮಾಡದಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಉಪಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಾರೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು):- ಉಪಾಧ್ಯಕ್ಷರೆ, ಈ ಬಗ್ಗೆ ಹೇಳಿಕೆಯನ್ನು ಮಧ್ಯಾಹ್ನ ನೀಡುತ್ತೇನೆ.

ಉಪಾಧ್ಯಕ್ಷರು:- ಈಗ ಕಾರ್ಯಕಲಾಪಗಳ ಪಟ್ಟಿಯಂತೆ ಬೇಡಿಕೆಗಳ ಮೇಲೆ ಮಾತನಾಡಬೇಕಾಗಿದೆ...

5) ನಿಯಮ 173ರ ಮೇರೆಗೆ ಚರ್ಚೆ

ವಿಷಯ:- ಬೇಡಿಕೆಗಳ ಪರ್‌ಫಾರ್ಮೆನ್ಸ್ ಬಜೆಟ್ ರಿಪೋರ್ಟನ್ನೂ ಒದಗಿಸದೇ ಇರುವ ಬಗ್ಗೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬೇಡಿಕೆಗಳ ಮೇಲೆ ಮಾತನಾಡುವುದಕ್ಕಿಂತ ಮುಂಚೆ ನಿಯಮ 173 ಕೆಳಗೆ ನಾನು ಪ್ರಸ್ತಾಪ ಮಾಡಿದ್ದೆ. ಕೊನೆಯ ಪಕ್ಷ ನಿನ್ನೆ ಕೊಡಲಿಕ್ಕೆ ಆಗಲಿಲ್ಲ ಅಂತ ಅಂದರು, ಇವೊತ್ತು ಎಲ್ಲಾ ಬೇಡಿಕೆಗಳ ಮೇಲಿನ ಫರ್‌ಫಾರ್ಮೆನ್ಸ್ ಬಜೆಟ್‌ನ್ನು ಈ ಸದನದ ಮುಂದೆ ಇಡುತ್ತೇವೆ ಎಂದು ಹೇಳಿದ್ದರು. ನಿಯಮ 173ರ ಪ್ರಕಾರವಾಗಿ "the Annual Financial Statement or the Statement of the estimated Receipts and Expenditure of the Government in respect of each financial year (hereinafter referred to as the Budget) shall be presented to the House on such day as the Governor may direct." ಇದು ಆಯಿತು. ಮುಂದೆ ಯಾವುದು ಎಂದರೆ, ಡಿಮಾಂಡ್ಸ್ ಫಾರ್ ಗ್ರ್ಯಾಂಟ್ಸ್ ರೂಲ್ 174, 175 ಇದನ್ನು ಡೀಲ್ ಮಾಡುತ್ತದೆ. ಇದು ಯಾವ ಸಂದರ್ಭದಲ್ಲಿ, ಬಜೆಟ್ ಪ್ರೆಸೆಂಟ್ ಮಾಡುವುದಕ್ಕೆ ಪ್ರೊಸೀಜರ್ ಏನು ಎನ್ನತಕ್ಕಂಥದ್ದನ್ನು ಸೆಕ್ಷನ್ 173ರಲ್ಲಿ ಹೇಳುತ್ತರೆ. Procedure in financial matters ಹೇಗೆ ಬಜೆಟ್ ಪ್ರೆಸೆಂಟ್ ಮಾಡಬೇಕು ಎಂದು. ಇದು ಸೆಕ್ಷನ್ 173, 174, 175 ರೂಲನ್ನ ಭಾರತ ಸಂವಿಧಾನದ 202ನೇ ಅನುಚ್ಛೇದದ ಪ್ರಕಾರ Procedure to the Financial Matter ಇದರೊಳಗೂ ಕೂಡ ನಮ್ಮ ಈ ಪ್ರೊಸೀಜರನ್ನು ಅಳವಡಿಸಿಕೊಂಡಿದ್ದಾರೆ. ಅಂದರೆ ಯಾವಯಾವ ಡಾಕ್ಯುಮೆಂಟನ್ನು ಸದನದ ಮುಂದೆ ಇಡಬೇಕು, ಅದನ್ನು ಚರ್ಚೆ ಮಾಡುವಾಗ ಅಂದರೆ, ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಆ ವಾರ್ಷಿಕ ವರದಿಯ ಜೊತೆಯಲ್ಲೆ ಇದನ್ನು ಒದಗಿಸಿಕೊಡಬೇಕು ಎಂಬತಕ್ಕಂಥದ್ದನ್ನು